# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು

## ಅಧಿಸೂಚನೆ ಸಂಖ್ಯೆ ಡಿ/ಐಎಸ್‌ಡಿ/07/4, ದಿನಾಂಕ 25ನೇ ಮಾರ್ಚ್ 2005

## ಕವಿನಿ ಆಯೋಗ(ಭದ್ರತಾ ಠೇವಣಿಗಳ ಮೇಲಿನ ಬಡ್ಡಿ) ವಿನಿಯಮಗಳು, 2005

ಪೀಠಿಕೆ:

ವಿದ್ಯುಚ್ಛಕ್ತಿ ಅಧಿನಿಯಮ 2003(2003ರ 36)ರ ಪರಿಚ್ಛೇದ 181ರ ಮೂಲಕ ದತ್ತವಾದ ಅಧಿಕಾರ ಹಾಗೂ ಪರಿಚ್ಛೇದ 47(4)ರ ಅನುಸರಣೆಯಾಗಿ, ಹಾಗೂ ಇದರ ಪರವಾಗಿ ಎಲ್ಲ ಅಧಿಕಾರಗಳ ಅವಕಾಶವನ್ನು ಕಲ್ಪಿಸಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮುಂದೆ ತಿಳಿಸಿರುವಂತೆ ವಿನಿಯಮಗಳನ್ನು ರೂಪಿಸಿದೆ:

1. ಕಿರುಶೀರ್ಷಿಕೆ,ಪ್ರಾರಂಭ ಹಾಗೂ ನಿರೂಪಣೆ:

   ಎ) ಈ ವಿನಿಯಮಗಳನ್ನು ಕ.ವಿ.ನಿ.ಆ.(ಭದ್ರತಾ ಠೇವಣಿಗಳ ಮೇಲಿನ ಬಡ್ಡಿ) ವಿನಿಯಮಗಳು, 2005 ಎಂದು ಹೆಸರಿಸಲಾಗಿದೆ.

   ಬಿ) ಈ ವಿನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರುತ್ತವೆ.

   ಸಿ) ಈ ವಿನಿಯಮಗಳು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತವೆ.

2. ಪರಿಭಾಷೆ

   ಈ ವಿನಿಯಮಗಳಲ್ಲಿ, ಪ್ರಕರಣಗಳು, ಸಂದರ್ಭಗಳು ಅನ್ಯಥಾ ಅಗತ್ಯಪಡಿಸದ ಹೊರತು,

   ಎ) 'ಅಧಿನಿಯಮ' ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003 (ಅಧಿನಿಯಮ 2003ರ ಪರಿಚ್ಛೇದ 36 )

   ಬಿ) 'ಹೆಚ್ಚುವರಿ ಭದ್ರತಾ ಠೇವಣಿ(ಹೆ.ಭ.ಠೇ)' ಎಂದರೆ ಅನುಗುಣ ನಿಯಮಗಳ ಪ್ರಕಾರ ಕನಿಷ್ಠ ಠೇವಣಿಯನ್ನು ಅಗತ್ಯತೆಗನುಗುಣವಾಗಿ ಹೆಚ್ಚುವರಿಯಾಗಿ ವಸೂಲಿ ಮಾಡುವುದು.

   ಸಿ) 'ಬ್ಯಾಂಕ್ ರೇಟ್' ಎಂದರೆ ಭಾರತೀಯ ರಿಸರ್ವ್ ಬ್ಯಾಂಕ್ ಗೊತ್ತುಪಡಿಸುವ ಬ್ಯಾಂಕ್ ದರ.

   ಡಿ) 'ಆಯೋಗ' ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

   ಇ) "ಗ್ರಾಹಕ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಅಥವಾ ಪ್ರಸ್ತುತ ಚಾಲ್ತಿಯಲ್ಲಿರುವ ಇನ್ನಿತರ ಯಾವುದೇ ಕಾನೂನಿನ ಅಡಿಯಲ್ಲಿ ಸಾರ್ವಜನಿಕರಿಗೆ ವಿದ್ಯುತ್ ಸರಬರಾಜು ಮಾಡುವ ಸರ್ಕಾರ ಅಥವಾ ಲೈಸೆನ್ಸುದಾರರು ಅಥವಾ ವಿದ್ಯುತ್ ಸರಬರಾಜು ಮಾಡಲು ವ್ಯವಹರಣೆಯ ಅನುಮತಿಯನ್ನು ಪಡೆದಿರುವ ಯಾವುದೇ ವ್ಯಕ್ತಿಯಿಂದ ತನ್ನ ಸ್ವಂತ ಉಪಯೋಗಕ್ಕಾಗಿ ವಿದ್ಯುತ್ ಸರಬರಾಜು ಪಡೆಯುತ್ತಿರುವ ವ್ಯಕ್ತಿ, ಹಾಗೂ ಪ್ರಕರಣಕ್ಕನುಗುಣವಾಗಿ ಸರ್ಕಾರ, ಲೈಸೆನ್ಸುದಾರರು ಅಥವಾ ಅನುಮೋದಿತ ಇನ್ನಿತರ ವ್ಯಕ್ತಿಯ ಕಾರ್ಯಗಳ ಮೂಲಕ, ವಿದ್ಯುತ್ ಸರಬರಾಜು ಪಡೆಯುವ ಉದ್ದೇಶಕ್ಕಾಗಿ ತನ್ನ ಆವರಣಕ್ಕೆ ವಿದ್ಯುತ್ ಸಂಪರ್ಕ ಪಡೆಯುತ್ತಿರುವ ವ್ಯಕ್ತಿ.

   ಎಫ್) "ಸ್ಥಾಪನ" ಎಂದರೆ ವಿದ್ಯುತ್ ಸರಬರಾಜು ಬಿಂದುವಿನಿಂದ ಆವರಣದವರೆಗೆ ವಿದ್ಯುತ್ ಸರಬರಾಜಿಗಾಗಿ ಗ್ರಾಹಕರೇ ಅಥವಾ ಗ್ರಾಹಕರ ಪರವಾಗಿ ಸ್ಥಾಪಿಸಿರುವ ವಿದ್ಯುತ್ ವೈರಿಂಗ್, ಜೋಡಣೆಗಳು, ಮೋಟಾರುಗಳು, ಸಲಕರಣೆಗಳು.

   ಜಿ) " ಕ.ವಿ.ಸು. (ಕೆ..ಇ.ಆರ್.)ಅಧಿನಿಯಮ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಅಧಿನಿಯಮ, 1999(1999ರ ಕರ್ನಾಟಕ ಅಧಿನಿಯಮ 25).

   ಎಚ್) " ಲೈಸೆನ್ಸಿ" ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ 2003ರ ಅಡಿಯಲ್ಲಿ ವಿತರಣೆಯ ಲೈಸೆನ್ಸನ್ನು ಹೊಂದಿರುವ ವ್ಯಕ್ತಿ.

   ಐ) " ಆರ್.ಆರ್.ಸಂಖ್ಯೆ ಅಥವಾ ರೆವಿನ್ಯೂ ರಿಜಿಸ್ಟರ್ ಸಂಖ್ಯೆ" ಎಂದರೆ ಗ್ರಾಹಕರ ಸ್ಥಾಪನಕ್ಕೆ ನಿಗದಿಪಡಿಸಿರುವ ಸಂಖ್ಯೆ.

ಜೆ) "ಭದ್ರತಾ ಠೇವಣಿ" ಎಂದರೆ ಎಂ.ಎಂ.ಡಿ(ಮಾಸಿಕ ಕನಿಷ್ಠ ಠೇವಣಿ)/ ಎಂ.ಎಸ್.ಡಿ (ಮೀಟರ್ ಭದ್ರತಾ ಠೇವಣಿ). ಎಂ.ಎಂ.ಡಿ.ಯಲ್ಲಿ 2 ತಿಂಗಳುಗಳ / 3 ತಿಂಗಳುಗಳ / ವಾರ್ಷಿಕ ಕನಿಷ್ಠ ಠೇವಣಿಯ ಮೊಬಲಗು ಒಳಗೊಂಡಿರುತ್ತದೆ.

ಈ ವಿನಿಯಮಗಳಲ್ಲಿ ಉಪಯೋಗಿಸಿರುವ ಪದಗಳು ಹಾಗೂ ನಿರೂಪಣೆಗಳಿಗೆ ವಿವರಣೆಗಳನ್ನು ನೀಡಿಲ್ಲ, ಆದರೆ ಅಧಿನಿಯಮ/ ಕರ್ನಾಟಕ ಸುಧಾರಣ ಅಧಿನಿಯಮದಲ್ಲಿ ವಿವರಿಸಲಾಗಿದ್ದು, ಅದೇ ಅರ್ಥವು ಈ ವಿನಿಯಮಗಳಲ್ಲೂ ಅನ್ವಯಿಸುತ್ತದೆ. ಅಧಿನಿಯಮ ಹಾಗೂ ಕ.ವಿ.ಸು.ಅಧಿನಿಯಮ, 1999ರಲ್ಲಿ ಉಪಯೋಗಿಸಿರುವ ಪದಗಳು ಹಾಗೂ ನಿರೂಪಣೆಗಳಲ್ಲಿ ಹೊಂದಾಣಿಕೆ ಅಥವಾ ಸಮಂಜಸತೆ ಇಲ್ಲದಿದ್ದಲ್ಲಿ ಅಧಿನಿಯಮದಲ್ಲಿನ ಅವಕಾಶಗಳು ಪ್ರಾಧಾನ್ಯತೆಯನ್ನು ಪಡೆಯುತ್ತವೆ.

3. ಭದ್ರತಾ ಠೇವಣಿಯ ಮೇಲೆ ಬಡ್ಡಿ

3.1 ಲೈಸೆನ್ಸುದಾರರು, ಗ್ರಾಹಕರಿಂದ ಪಡೆದಿರುವ ಭದ್ರತಾ ಠೇವಣಿಗೆ ಆರ್ಥಿಕ ವರ್ಷದ ಏಪ್ರಿಲ್ 1ರಂದು ಚಾಲ್ತಿಯಲ್ಲಿರುವ ಬ್ಯಾಂಕ್ ದರಗಳ ಪ್ರಕಾರ ಬಡ್ಡಿಯನ್ನು ಪಾವತಿಸತಕ್ಕದ್ದು.

3.2 ಗ್ರಾಹಕರಿಗೆ ಆಯಾ ಆರ್ಥಿಕ ವರ್ಷಕ್ಕೆ ಪಾವತಿಸಬೇಕಾದ ಬಡ್ಡಿಯನ್ನು ನಂತರದ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕ ಅವಧಿಯಲ್ಲಿ ಆಯಾ ಗ್ರಾಹಕರ ಲೆಕ್ಕ ಖಾತೆಗೆ ಜಮಾ ಮಾಡಿ, ವಿದ್ಯುತ್ ಬಳಕೆಯ ಶುಲ್ಕಕ್ಕೆ ಹೊಂದಾಣಿಕೆ ಮಾಡತಕ್ಕದ್ದು.

3.3 ಆಯಾ ಗ್ರಾಹಕರ ಲೆಕ್ಕದಲ್ಲಿ ಇರುವ ಠೇವಣಿಯ ಮೊಬಲಗು ಹಾಗೂ ಬಡ್ಡಿಯನ್ನು ಜಮಾ ಮಾಡಿ, ವಿದ್ಯುತ್ ಬಳಕೆಯ ಶುಲ್ಕಕ್ಕೆ ಹೊಂದಾಣಿಕೆ ಮಾಡಿದ ವಿವರಗಳನ್ನು ಅದೇ ತಿಂಗಳಲ್ಲಿ ಗ್ರಾಹಕರಿಗೆ ಕಳುಹಿಸುವ ಬಿಲ್ಲಿನಲ್ಲಿ ನಮೂದಿಸತಕ್ಕದ್ದು.

3.4 ವರ್ಷದ ಯಾವುದೇ ತಿಂಗಳಿನಲ್ಲಿ ಗ್ರಾಹಕರಿಂದ ಹೆಚ್ಚುವರಿ ಭದ್ರತಾ ಠೇವಣಿ ಹಾಗೂ ಮಾಪಕ ಭದ್ರತಾ ಠೇವಣಿಗಳನ್ನು ಪಡೆದಾಗ, ಅಂತಹ ಠೇವಣಿಗಳಿಗೆ, ನಂತರದ ತಿಂಗಳಿನಿಂದ ಬಡ್ಡಿಯನ್ನು ಲೆಕ್ಕಾಚಾರ ಮಾಡತಕ್ಕದ್ದು.

3.5 ಹೊಸ ಸ್ಥಾಪನಗಳ ವಿಷಯದಲ್ಲಿ, ಸ್ಥಾಪನಕ್ಕೆ ವಿದ್ಯುತ್ ಸರಬರಾಜಿನ ಸೇವೆಯನ್ನು ಒದಗಿಸಿದ ತಿಂಗಳಿನ ನಂತರದ ತಿಂಗಳಿನಿಂದ ಬಡ್ಡಿಯನ್ನು ಲೆಕ್ಕಾಚಾರ ಮಾಡತಕ್ಕದು.

3.6 ಪಡೆದಿರುವ ಠೇವಣಿಯ ಮೊಬಲಗು ಎಷ್ಟೇ ಇರಲಿ, ಆಯಾ ಆರ್.ಆರ್.ಸಂಖ್ಯೆಗೆ ಬಡ್ಡಿಯನ್ನು ಪಾವತಿಸತಕ್ಕದ್ದು.

3.7 ಭದ್ರತಾ ಠೇವಣಿಗೆ ಪಾವತಿಸುವ ಬಡ್ಡಿಯನ್ನು ಹತ್ತಿರದ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು.

4.0 ಇತರೆ

4.1 ಅಡಚಣೆಗಳನ್ನು ತೊಡೆದುಹಾಕಲು ಅಧಿಕಾರ

(ಎ) ಈ ವಿನಿಯಮಗಳಲ್ಲಿನ ಯಾವುದೇ ಷರತ್ತು/ಅವಕಾಶಗಳನ್ನು ಜಾರಿಗೊಳಿಸುವ ಸಂದರ್ಭಗಳಲ್ಲಿ ಅಡಚಣೆ ಉಂಟಾದರೆ, ವಿದ್ಯುಚ್ಛಕ್ತಿ ಅಧಿನಿಯಮ, 2003ಕ್ಕೆ ಹೊಂದಾಣಿಕೆಯಾಗಿಲ್ಲವೆಂದು ಕಂಡುಬರುವ ಅಂತಹ ಷರತ್ತು / ಅವಕಾಶಗಳನ್ನು ತೊಡೆದುಹಾಕಬೇಕಾದ ಅವಶ್ಯಕತೆ ಕಂಡುಬಂದಲ್ಲಿ, ಲೈಸೆನ್ಸುದಾರರು ಸೂಕ್ತ ಕ್ರಮ ತೆಗೆದುಕೊಳ್ಳಲು ಆಯೋಗವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಲೈಸೆನ್ಸುದಾರರಿಗೆ ನಿರ್ದೇಶನ ನೀಡಬಹುದಾಗಿದೆ.

(ಬಿ) ಈ ವಿನಿಯಮಗಳನ್ನು ಅನುಷ್ಠಾನಗೊಳಿಸುವ ಸಂದರ್ಭಗಳಲ್ಲಿ ಕಂಡುಬರುವ ಅಂತಹ ಅಡಚಣೆಗಳನ್ನು ತೊಡೆದುಹಾಕುವ ಸಲುವಾಗಿ, ಲೈಸೆನ್ಸುದಾರರು ಆಯೋಗಕ್ಕೆ ಮನವಿಯನ್ನು ಸಲ್ಲಿಸಿ ಯುಕ್ತ ಆದೇಶವನ್ನು ಪಡೆಯಬಹುದಾಗಿದೆ.

5. ರದ್ದುಗೊಳಿಸುವಿಕೆ ಹಾಗೂ ಬಳಕೆ;

ಕವಿನಿಆಯೋಗ(ವಿಸ ಮತ್ತು ವಿ) ಸಂಹಿತೆ 2000-2001ರ ಪರಿಚ್ಛೇದ 30.05(ಸಿ)ನ್ನು ರದ್ದುಪಡಿಸಲಾಗಿದೆ.

ಆಯೋಗದ ಆದೇಶದಂತೆ,

ಸಹಿ

ಕಾರ್ಯದರ್ಶಿ,

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ